ಅತಿಕ್ರಮಣ ಮಾಡಿದ ಜಮೀನಿನ ಕುರಿತು.

೯೫(೧೧೨) ಶ್ರೀ ಗೋಪಾಲ ಪಂಡಿತ್ ಕಾನಡೆ (ಖಿರ್ಸಿ)—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆ, ಶಿರಸಿ ಸಿದ್ದಾಪುರ ತಾಲ್ಲೂಕಿನ ಅರಣ್ಯ ಜಮೀನಿನಲ್ಲಿ ಕಳೆದ ೦ ವರ್ಷಗಳಿಂದ ಅತಿಕ್ರಮಣ ಮಾಡಿ ಮನೆ ಕಟ್ಟಿಕೊಂಡವರು ಹಾಗೂ ಜಮೀನು ಸಾಗುವಳಿ ಮಾಡುತ್ತಿರುವವರಿಗೆ ಜಮೀನನ್ನು ಸಕ್ರಮಗೊಳಿಸಲಾಗುವುದೆಂದು ಸದನದಲ್ಲಿ ನೀಡಿದ ಭರವಸೆಯನ್ನು ಸರ್ಕಾರ ಈವರೆಗೆ ಈಡೇರಿಸದೆ ಇರುವುದಕ್ಕೆ ಕಾರಣವೇನು ?

ಶ್ರೀ ಜೆ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು) —

ಅ) ದಿನಾಂಕ ೨೭-೪-೧೯೭೮ರ ಪೂರ್ವದಲ್ಲಾದ ಎಲ್ಲಾ ಅತಿಕ್ರಮ ಸಾಗುವಳಿಗಳನ್ನು ಸಕ್ರಮಗೊಳಿಸಬೇಕೆಂದು ಇದರನ್ವಯ ಸರ್ಕಾರ ಆದೇಶ ಸಂಖ್ಯೆ ಎಫ್ ಎಫ್ ಡಿ ೨೩೧ ಎಫ್ ಜಿ ಎಲ್ ೮೩ ದಿನಾಂಕ ೭-೩-೮೭ರಲ್ಲಿ, ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚಿಸಲಾಗುತ್ತಿದ್ದು, ಈ ಸಮಿತಿಯಿಂದ ಎಲ್ಲಾ ಪ್ರಕರಣಗಳನ್ನು ಪರಿಶೀಲಿಸಿ ಸಲ್ಲಿಸುವ ವರದಿಗಳನ್ನು ಕೇಂದ್ರ ಸರ್ಕಾರದ ಪೂರ್ವಾನುಮತಿಗಾಗಿ ಕಳಿಸಿ ಕೊಡಲಾಗುವುದು. ಕೇಂದ್ರ ಸರ್ಕಾರದ ಪೂರ್ವಾನುಮತಿ ದೊರೆತ ಮೇಲೆ ಕ್ರಮ ತೆಗೆದು ಕೊಳ್ಳಲಾಗುವುದು.

ನೀರಾವರಿ ಪಂಪುಸೆಟ್ಟುಗಳಿಗೆ ಬಳಸುವ ವಿದ್ಯುತ್

೫೩೭. ಶ್ರೀ ಜಿ ರಾಜುಗೌಡ (ಹನೂರು).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೩೧-೧೨-೮೭ರ ವರೆಗೆ ಎಷ್ಟು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ತನ್ನು ಒದಗಿಸಲಾಗಿದೆ;

ಆ) ರಾಜ್ಯದ ಉತ್ಪಾದನೆಯ ಶೇಕಡಾ ಎಷ್ಟರ ಪ್ರಮಾಣವನ್ನು ನೀರಾವರಿ ಪಂಪುಸೆಟ್ಟುಗಳಿಗಾಗಿ ಬಳಸಲಾಗುತ್ತಿದೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ೩೧-೧೨-೮೭ರ ವೇಳೆಗೆ ೫,೭೦,೨೯೯ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲಾಗಿದೆ.

ಆ) ನೀರಾವರಿ ಪಂಪುಸೆಟ್ಟುಗಳಿಗೆ ೧೯೮೬-೮೭ನೇ ಸಾಲಿನ ಆಂತರಿಕ ಉತ್ಪಾದನೆಯಿಂದ ಲಭ್ಯವಾದ ವಿದ್ಯುತ್ತಿನ ಸುಮಾರು ಶೇಕಡಾ ೧೯.೫೨ ರಷ್ಟು ವಿದ್ಯುತ್ತನ್ನು ಒದಗಿಸಲಾಯಿತು.

ರಬಕವಿ-ಬನಹಟ್ಟಿ ಅರಣ್ಯ ನಿವೇಶನಗಳು

೧೨೪. ಶ್ರೀ ಬಾಬುರೆಡ್ಡಿ ತುಂಗಳ (ಬೀಳಗಿ) —ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಜಮಖಂಡಿ ತಾಲ್ಲೂಕಿನ ರಬಕವಿ ಬನಹಟ್ಟಿ ವಾಪ್ತಿಯಲ್ಲಿನ ಅರಣ್ಯ ಪ್ರದೇಶ ನಿವೇಶನಗಳಲ್ಲಿರುವ ಒಟ್ಟು ಕುಟುಂಬಗಳ ಸಂಖ್ಯೆ ಎಷ್ಟು;

ಆ) ಇಲ್ಲಿ ವಾಸ್ತವ್ಯ ಮಾಡಿಕೊಂಡಿರುವ ನೇಕಾರರ ಕುಟುಂಬಗಳಿಗೆ ನಿವೇಶನ ಕ್ರಮಬದ್ಧಗೊಳಿಸಲಾಗಿದೆಯೇ ;

ಇ) ಹಾಗಿಲ್ಲದಿದ್ದಲ್ಲಿ ನಿವೇಶನಗಳನ್ನು ಕ್ರಮಬದ್ಧ ಮಾಡುವಲ್ಲಿ ಸರ್ಕಾರಕ್ಕಿರುವ ಅಡಚಣೆಗಳೇನು ?